ತಾರೀಖು 2ನೇ ಜುಲೈ 1903.

ಶಿಡ್ಲಘಟ್ಟದ ತಾಲ್ಲೂಕು ಜಂಗಂಕೋಟೆ ಹೋಬಳೀಗೆ ಸೇರಿದ ಖಾಯಂಗುತ್ತಾ ಚಿಕ್ಕಬಲ್ಲ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟೆಂಬರ್ ಮಾಹೆ 1ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚಿನ ತಪಶೀಲು ಬಗ್ಗೆ 16—7—1903ನೇ ಮಾರ್ಕ್ಕಂ 28ನೇ ನಂಬರ್ ಮೈಸೂರ ಗೆಜೆಟ್ಟಿನ IIನೇ ಭಾಗದ 374ನೇ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 24ನೇ ಜೂ್ನ 1903.

ಕೋಲಾರ ತಾಲ್ಲೂಕಿಗೆ ಶೇರಿದ ಕಾಯಂಗುತ್ತಾ ರಾಮಾಪುರದ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರ ವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಆಗಸ್ಟ್ಟು 11ನೇ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚಿನ ತಪಶೀಲು ಬಗ್ಗೆ 16—7—1903ನೇ ಮಾರ್ಕ್ಕಂ 28ನೇ ನಂಬರ್ ಗಜೆಟ್ಟಿನ IIನೇ ಭಾಗದ 371-372ನೇ ನಂಬರ್ ಪೇಜು ನೋಡತಕ್ಕದ್ದು.

ಎಚ್. ದಾಸಪ್ಪ,
ಫೂರ್ ಡೆಪ್ಯೂಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಜೋಡಿ ಹುಳಿಸಂದ್ರ ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮಾರ್ಕ್ಕಂನಲ್ಲಿ ತಿಪಟೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮಾರ್ಕ್ಕಂ 30ನೇ ನಂಬರ್ ಮೈಸೂರ ಗೆಜೆಟ್ಟಿನಲ್ಲಿ ಫಾಯಿಷ್ ಆಗಿ ಇದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕು ಕಾಯಂಗುತ್ತಾ ಮ್ಯೂಕೆತಿಮ್ಮನಹಳ್ಳಿ ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮಾರ್ಕ್ಕಂನಲ್ಲಿ ಮದ್ದಗಿರಿ ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮಾರ್ಕ್ಕಂ 30ನೇ ನಂಬರ್ ಮೈಸೂರ ಗೆಜೆಟ್ಟಿನಲ್ಲಿ ಫಾಯಿಷ್ ಆಗಿ ಇದೆ.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 20ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ರಾಮಸಮುದ್ರದ ನಾಲಾ ಬಡಾವಣೆಗಾಗಿ ಅಕ್ವೈರು ಮಾಡಿಕೊಂಡಿರುವ ಜಮೀನುಗಳ ಕಂಪೆನ್ಸೇಷನ್ ಮೊಬಲಗು ಇದೆ ಸಾಲ್ ಆಗಸ್ಟು ಗುರ್ಸೀಲಾಗಾಯಿತು ಪಾವತಿ ಮಾಡಲ್ಪಡುತ್ತೆ.

ಸದರಿ ಜಮೀನುಗಳಲ್ಲಿ ಹಕ್ಕು ಯಾ ಬಾಧ್ಯತೆವುಳ್ಳವರು ತಮ್ಮಲ್ಲಿರುವ ವಿಶಿಷ್ಟ ಟೈಟಲ್ ಡೀಡುಯಾನೆ ದಾಖಲಾತುಗಳು ನಿತಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ನಮ್ಮ ರೂಬರೂ ಹಾಜರಾಗಿ ವಾಂಗ್ಮೂಲ ಕೊಟ್ಟು ತಮ್ಮ ಹಕ್ಕನ್ನು ಊರ್ಜಿತಪಡಿಸಿಕೊಟ್ಟು ವಿಧಾಯಕವಾದ ಕಂಪೆನ್ಸೇಷನ್ ಮೊಬಲಗನ್ನು ಪಡಿಯಬಹುದು.

ಬಿ. ಕೃಷ್ಣರಾವ್,
ಅಡಿಷನಲ್ ಅಸಿಸ್ಟೆಂಟ್ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ರ 1903—1904ನೇ ಇಸವಿ ಅರ್ಜೀ ನಂಬರ್ 25.

ಮೃತಪಟ್ಟ ಚಿಕ್ಕಗಿರೀಸಾಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಲಕ್ಷ್ಮಣಸಾ ಮೈನರ್, ಗಾರ್ಡಿಯ್ ಜವನಾಬಾಯಿ, ಮೃತಪಟ್ಟ ಸದರೀ ಚಿಕ್ಕಗಿರೀಸಾಯವರಿಗೆ ಮುಖ್ಯವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಚಿಕ್ಕಗಿರೀಸಾಯವರ ಜೆಂವಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಣಸಾಯವರ ಅರ್ಜಿಯನ್ನು ಸ್ರ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯಾತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಗಿರೀಸಾಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1903ನೇ ಇಸವಿ ಜುಲೈ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ ಈ 1903—1904ನೇ ಇಸವಿ ಅರ್ಜೀ ನಂಬರ್ 4.

ಅರ್ಜೀದಾರ್ರು ಮೈಸೂರು ಕಿಲ್ಲೆಯಲ್ಲಿರುವ ಮಾಧ್ವಬ್ರಾಹ್ಮಣ ವೆಂಕಮ್ಮನ ಮಗಳು ಸಾವಿತ್ರಮ್ಮನ ಮಕ್ಕಳು 1ನೇ ಕೃಷ್ಣಮೂರ್ತಿ, 2ನೇ ನರಹರಿಮೂರ್ತಿ ಇವರುಗಳ ಮೈನರ್ ಗಾರ್ಡಿಯರ್ ಜನಕತಂದೆ ಅರಮನೆ ಖಜಾನೆಗುಮಾಸ್ತೆ ಗುಂಡಪ್ಪ, ಮೈನರಾದ ಮೈಸೂರ ಸ್ಥಳದ ಕೃಷ್ಣಮೂರ್ತಿ, ನರಹರಿಮೂರ್ತಿಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕೃಷ್ಣಮೂರ್ತಿ, ನರಹರಿಮೂರ್ತಿಯವರಿಗೆ ಜನಕತಂದೆ ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ಅರಮನೆ ಖಜಾನೆ ಗುಮಾಸ್ತೆ ಗುಂಡಪ್ಪನವರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ಈ 1903ನೇ ಇಸವಿ ಆಗಸ್ಟ್ ತಾರೀಖು 28ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ಈ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1903—1904ನೇ ಇಸವಿ ಅರ್ಜೀ ನಂಬರ್ 19.

ಅರ್ಜೀದಾರ್ರು ಮೈಸೂರು ಸುಬ್ಬಾಯನ ಕೆರೆ ಬಳಿಯಲ್ಲಿರುವ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಗಳು ರಾಜಮ್ಮ ಮೈನರ್, ಗಾರ್ಡಿಯರ್ ತಾಯಿ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮ, ಮೈನರಾದ ಮೈಸೂರು ಸ್ಥಳದ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಗಳು ರಾಜಮ್ಮನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಜಮ್ಮನವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮನು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ಈ 1903ನೇ ಇಸವಿ ಆಗಸ್ಟ್ 28ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ಈ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1903—1904ನೇ ಇಸವಿ ಅರ್ಜೀ ನಂಬರ್ 20.

ಅರ್ಜೀದಾರ್ರು ಮೈಸೂರು ಸುಬ್ಬಾಯನ ಕೆರೆ ಬಳಿಯಲ್ಲಿರುವ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಗಳು ರಂಗನಾಯಿಕಮ್ಮ ಮೈನರ್, ಗಾರ್ಡಿಯರ್ ತಾಯಿ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮ, ಮೈನರಾದ ಮೈಸೂರು ಸ್ಥಳದ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಗಳು ರಂಗನಾಯಿಕಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಂಗನಾಯಿಕಮ್ಮನವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ಈ 1903ನೇ ಇಸವಿ ಆಗಸ್ಟ್ ತಾರೀಖು 28ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ಈ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1903—1904ನೇ ಇಸವಿ ಅರ್ಜೀ ನಂಬರ್ 21.

ಅರ್ಜೀದಾರ್ರು ಮೈಸೂರು ಸುಬ್ಬಾಯನ ಕೆರೆ ಬಳಿಯಲ್ಲಿರುವ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಕ್ಕಳು ರಾಮಸ್ವಾಮಿ, ನರಸಿಹ್ಮಾಚಾರಿ ಮೈನರ್, ಗಾರ್ಡಿಯರ್ ತಾಯಿ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮ, ಮೈನರಾದ ಮೈಸೂರು ಸ್ಥಳದ ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಕ್ಕಳು ರಾಮಸ್ವಾಮಿ, ನರಸಿಹ್ಮಾಚಾರಿ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಸ್ವಾಮಿ, ನರಸಿಹ್ಮಾಚಾರ್ರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮ, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ಈ 1903ನೇ ಇಸವಿ ಆಗಸ್ಟ್ ತಾರೀಖು 28ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ಈ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ಈ 1903—1904ನೇ ಇಸವಿ ಅರ್ಜಿ ನಂಬರ್ 22.

ಅರ್ಜಿದಾರ್ರು ಮೈಸೂರು ಸುಬ್ಬಾಯನ ಕೆರೆ ಬಳಿಯಲ್ಲಿರುವ ಮೆ|| ಲೇಟ್ ಎಂ. ಕೃಷ್ಣಯ್ಯಂಗಾರ್ರ ಮಗಳು ಪೊನ್ನಮ್ಮ ಮೈನರ್, ಗಾರ್ಡಿಯರ್ ತಾಯಿ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮ, ಮೈನರಾದ ಮೈಸೂರು ಸ್ಥಳದ ಪೊನ್ನಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಪೊನ್ನಮ್ಮನಿಗೆ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ವೆಂಕಟಲಕ್ಷಮ್ಮ ಉರಫ್ ಕುಟ್ಟಮ್ಮನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ ಈ 1903ನೇ ಇಸವಿ ಆಗಸ್ಟು ತಾರೀಖು 28ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ಈ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಟ 1902—1903ನೇ ಇಸವಿ ಅರ್ಜೀ ನಂಬರ್ 386.

ಅರ್ಜೀದಾರ್ರು ಹುಣಸೂರು ತಾಲ್ಲೂಕು ಅಮಲ್ದಾರ್ರು, ಮೈನರಾದ ಬಟ್ಟದಪುರದ ಸ್ಥಳದ ದಿಡ್ಡಿ ನರಸಿಹ್ಮ ಉಪಾಧ್ಯರ ಮಗ ಚಂದ್ರಶೇಖರಯ್ಯನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚಂದ್ರಶೇಖರೈಯ್ಯನವರಿಗೆ ಹಿತಚಿಂತಕನು ಆಗಬೇಕೆಂಬ ಹಕ್ಕಿನಮೇಲೆ ಹುಣಸೂರು ತಾಲ್ಲೂಕು ಅಮಲ್ದಾರ್ರು ಬಟ್ಟದಪುರದಲ್ಲಿರುವ ಕೋನೇರಿಭಟ್ಟರನ್ನೆ ಆಗಲಿ ಯಾ ಮತ್ತು ಯಾರನ್ನೇ ಆಗಲಿ ವೊಕರರು ಮಾಡಿ ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಟ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಟ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಟ 1902—1903ನೇ ಇಸವಿ ಅರ್ಜೀ ನಂಬರ್ 387.

ಅರ್ಜೀದಾರ್ರು ಹುಣಸೂರು ತಾಲ್ಲೂಕು ಅಮಲ್ದಾರ್ರು, ಮೈನರಾದ ಹುಣಸೂರು ಸ್ಥಳಿದ ವೈಶ್ಯರ ವೆಂಕಟಸುಬ್ಬಶೆಟ್ಟರ ಮಗ ರಾಮುಶೆಟ್ಟರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮುಶೆಟ್ಟರಿಗೆ ಹಿತಚಿಂತಕನು ಆಗಬೇಕೆಂಬ ಹಕ್ಕಿನಮೇಲೆ ಹುಣಸೂರು ತಾಲ್ಲೂಕು ಅಮಲ್ದಾರ್ರು ಸ್ಥಳಿದ ಒಬ್ಬ ಲಾಯಖಾದವನನ್ನೇ ವೊಕರರು ಮಾಡಿ ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟುಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಟ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಟ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಟ 1902—1903ನೇ ಇಸವಿ ಅರ್ಜೀ ನಂಬರ್ 404.

ಅರ್ಜೀದಾರ್ರು ಚಾಮರಾಜನಗರದ ತಾಲ್ಲೂಕು ಕಸಬಾದಲ್ಲಿರುವ ಮೃತಪಟ್ಟ ಮಾಳಿಗೆಮನೆ ಸೂರಶೆಟ್ಟರ ಮಕ್ಕಳು 1ನೇ ಜ್ವಾಲನಮ್ಮ, 2ನೇ ಗುಣವತಮ್ಮ ಇವರು ಮೈನರ್, ಗಾರ್ಡಿಯರ್ ಸದರೀ ಸ್ಥಳದಲ್ಲಿರುವ ಜೈನರ ಪುಟ್ಟಶೆಬ್ಬ ಮಗ ಚಂದ್ರಶೆಟ್ಟ, ಮೈನರಾದ ಚಾಮರಾಜನಗರದ ಸ್ಥಳದ ಮಾಳಿಗೆ ಮನೆ ಸೂರಶೆಟ್ಟರ ಮಕ್ಕಳು ಜ್ವಾಲನಮ್ಮ, ಗುಣವತಮ್ಮನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಜ್ವಾಲನಮ್ಮ, ಗುಣವತಮ್ಮ ಇವರಿಗೆ ಸೋದರಮಾವನು ಆಗಬೇಕೆಂಬ ಹಕ್ಕಿನಮೇಲೆ ಚಾಮರಾಜನಗರದ ಸ್ಥಳದ ಜೈನರ ಚಂದ್ರಶೆಟ್ಟ ಎಂಬುವರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಟ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ವೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಟ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮುಡ್ಯರ್, ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಟ 1903—1904ನೇ ಇಸವಿ ಮಿ|| ಅರ್ಜೀ ನಂಬರ್ 1.

ಮೃತಪಟ್ಟ ಹೊನ್ನಾಳಿ ತಾಲ್ಲೂಕು ನ್ಯಾಂತಿಯಲ್ಲಿದ್ದ ಮುರಿಗೆಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸೊಂಡೂರು ಶ್ಯಾಂತಪ್ಪ, 2ನೇ ಮುದ್ದಪ್ಪ, 3ನೇ ಇವನ ತಮ್ಮ ತಿಪ್ಪಂಣ, 4ನೇ ನಾಗಪ್ಪ, ಮೈನರ್ ಗಾ|| 1-2ನೇ ಅರ್ಜಿದಾರ್ರು, ಮೃತಪಟ್ಟ ಸದರೀ ಮುರಿಗೆಪ್ಪನವರಿಗೆ 1ನೇ ಅರ್ಜಿದಾರನು ಸಹೋದರನು 2-3-4ನೇ ಅರ್ಜಿದಾರ್ರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ನ್ಯಾಂತಿ ಸ್ಥಳದ 1ನೇ ಸೊಂಡೂರು ಶ್ಯಾಂತಪ್ಪ, 2ನೇ ಮುದ್ದಪ್ಪ, 3ನೇ ತಿಪ್ಪಂಣ, 4ನೇ ನಾಗಪ್ಪನವರು, ನ್ಯಾಂತಿ ವಾಸಸ್ಥರಾಗಿ ಮೃತಪಟ್ಟ ಮುರಿಗೆಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 54—10—1 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಸೊಂಡೂರು ಶ್ಯಾಂತಪ್ಪ, 2ನೇ ಮುದ್ದಪ್ಪ ಬಿ ಮುರಿಗೆಪ್ಪ, 3ನೇ ತಿಪ್ಪಂಣ, 4ನೇ ನಾಗಪ್ಪನವರ ಅರ್ಜಿಯನ್ನು ಸ್ಟ 1903ನೇ ಇಸವಿ ಆಗಸ್ಟ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ್ವಯಿಮರ್ಶಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುರಿಗೆಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಟ 1903ನೇ ಇಸವಿ ಜುಲೈ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ವೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೩--೧೯೦೪ನೇ ಇಸವಿ ಮಿ॥ ಅರ್ಜಿ ನಂಬರ್ 3.

ಮೃತಪಟ್ಟ ಹೊನ್ನಾಳೀ ವಾಸವಾಗಿದ್ದ ದೊಡ್ಡವೀರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಖುಂತೆ ದೊಡ್ಡವೀರಪ್ಪನವರ ಮಗ ನೀಲಪ್ಪ ಹೊನ್ನಾಳಿ ವಾಸಿ, ಮೃತಪಟ್ಟ ಸದರೀ ದೊಡ್ಡವೀರಪ್ಪನವರಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊನ್ನಾಳಿ ಸ್ಥಳದ ನೀಲಪ್ಪನವರು ಹೊನ್ನಾಳಿ ವಾಸಸ್ಥರಾಗಿ ಮೃತಪಟ್ಟ ದೊಡ್ಡವೀರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 227—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ರೆಗ್ಯುಲೇಷ್ನ್ ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನೀಲಪ್ಪನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡವೀರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 304.

ಮೃತಪಟ್ಟ ಬಸವಲಿಂಗೈಯ್ಯನ ಆಸ್ತೀ ವಿಷಯದಲ್ಲಿ --

ಅರ್ಜೀದಾರರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಬಿಂಡಗದ ಮಾಗಣಿ ಲಿಂಗೇನಹಳ್ಳಿಯಲ್ಲಿರುವ ಬಸವೆಗೌಡ ಬಿ ಮಲ್ಲಪ್ಪ, ಮೃತಪಟ್ಟ ಬಸವಲಿಂಗೈಯ್ಯನಿಗೆ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಟವ್ನ ದೋಣಿಕಣದಲ್ಲಿ ವಾಸಸ್ಥರಾಗಿ ಮೃತಪಟ್ಟ ಬಸವಲಿಂಗೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವೆಗೌಡ ಬಿ ಮಲ್ಲಪ್ಪನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಸಿಪ್ಟಂಬರ್ ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಬಸವಲಿಂಗೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಜುಲೈ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಐಯ್ಯರ್,
ಸಬ್ ಜಡ್ಜ್.

ನಂಜನಗೂಡು ಮುನ್ಸಿಫ್ ಕೋರ್ಟಿನಲ್ಲಿ.

ತಾರೀಖು 28ನೇ ಜುಲೈ 1903.

1902—1903ನೇ ಇಸವಿ ಸಿವಿಲ್ ನಂಬರು 166.

ವಾದಿ.	ಪ್ರತಿವಾದಿಗಳು.
ಯಳಂದೂರು ತಾಲ್ಲೂಕು ಜೋಡಿ ಗುಂಭಳ್ಳಿಯಲ್ಲಿರುವ ಆ ಗ್ರಾಮದ ಏಜಂಟ್ ನರಸಿಹ್ಮ ಉಪಾಧ್ಯರು.	ಯಳಂದೂರು ತಾಲ್ಲೂಕು ಯರಗಂಭಳ್ಳಿ ಹೋಬಳಿ ವಡಗೆರೆ ಗ್ರಾಮದ ವಾಸಸ್ಥರು—1ನೇ ಚಾವೇಗೌಡ, 2ನೇ ಚಿಕ್ಕೇಗೌಡ, 3ನೇ ವಂಕಟೇಗೌಡ, 4ನೇ ಮರಿಗೌಡ, 5ನೇ ಹಾಕಿಟ್ಟಗೌಡ, 6ನೇ ಜವರಾಯಿಗೌಡ, 7ನೇ ಚಕ್ಕಗೌಡ, 8ನೇ ಕಲ್ಲನ ಮಗ ರಂಗ, 9ನೇ ಮುದ್ದೇಗೌಡನ ಮಗ ಲಿಂಗೇಗೌಡ.

ಇದರಿಂದ ಜೋಡಿ ಗುಂಭಳ್ಳಿ ಗ್ರಾಮದ ಜೋಡೀದಾರರಾದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಪ್ರತಿವಾದಿ ಚಾವೇಗೌಡ ವಗೈರೇರು ಜೋಡೀ ಗುಂಭಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ 185, 186, 187, 218ನೇ ನಂಬರು ಪ್ರದೇಶದಲ್ಲಿ ದನಗಳು ಮೇಯಿಸಿದರೆಂತಲೂ ಇದಕ್ಕಾಗಿ ಡ್ಯಾನೇಜು (100) ರೂಪಾಯಿಗಳು ಬರಬೇಕೆಂತಲೂ, ಮೇಲ್ಕಂಡ ಏಜಂಟ್ ನರಸಿಹ್ಮ ಉಪಾಧ್ಯರು ದಾವಾ ಮಾಡಿದ್ದಾರೆ. ಸದರೀ ಗುಂಭಳ್ಳಿ ಗ್ರಾಮಕ್ಕೆ ಇನಾಂದಾರ್ರಾಗಿ ಹಕ್ಕು ಬಾಧ್ಯತೆ ಇರತಕ್ಕ ಸಮಸ್ತರೂ 12—10—1903ನೇ ಮೆರ್ತ್ಯಂ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬ್ ಹಾಜರಾಗಿ ಮೊಕದ್ದಮಾಕ್ಕೆ ಕಕ್ಷಿದಾರರಾಗಿ ಸೇರಬಹುದು.

ಕೆ. ಲಕ್ಷ್ಮೀನಾರಣಯ್ಯ,
ಮುನ್ಸೀಫ್.